ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು
ನಿಗಮ ನಿಯಮಿತ.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನ ಉಪ ವಿಭಾಗ
ಚಾ.ವಿ.ಸ.ನಿ.ನಿ. ಬೆಟ್ಟದಪುರ-571102
Telephone No : 08223-275464

C.E.S.C, MYSORE

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
O/o Assistant Executive Engineer (Ele)
O & M Sub division
CESC, Bettadapura-571 102
Website: www.cescmysore.org
E-mail: aeecescbpura@gmail.com

Company Identity Number[CIN] :- U40109KA2004SGC035177

No: AEE/AE(T)/CESC/BPura/2023-24/ 1341 Date: 11-10-23

# ಸಭೆ ನಡಾವಳಿಗಳು

ದಿನಾಂಕ 29.09.2023 ರಂದು ಮಧ್ಯಾಹ್ನ 3 ಗಂಟೆಗೆ ಕಾರ್ಯನಿರ್ವಾಹಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ ಕೆ.ಆರ್. ನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಬೆಟ್ಟದಪುರ ಕಾರ್ಯ ಮತ್ತು ಪಾಲನ ಉಪವಿಭಾಗದ ವ್ಯಾಪ್ತಿಯ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಸಭೆಯಲ್ಲಿ ಹಾಜರಿದ್ದವರು.</u>

1. ಶ್ರೀ ಪ್ರದೀಪ್ ಜಿ, ಕಾರ್ಯನಿರ್ವಾಹಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ. ಕೆ.ಆರ್.ನಗರ.
2. ಶ್ರೀ ಪ್ರಶಾಂತ್ ಕುಮಾರ್, ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ ಚಾ.ವಿ.ಸ.ನಿ.ನಿ. ಬೆಟ್ಟದಪುರ.
3. ಶ್ರೀ ಸುರೇಶ್ ಎಸ್, ಸಹಾಯಕ ಇಂಜನಿಯರ್(ತಾ), ಕಾರ್ಯ ಮತ್ತು ಪಾಲನಾ ಉಪವಿಭಾಗ ಚಾ.ವಿ.ಸ.ನಿ.ನಿ. ಬೆಟ್ಟದಪುರ.
4. ಶ್ರೀ ನವೀನ್ ವಿ.ಎನ್, ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಬೆಟ್ಟದಪುರ.
5. ಶ್ರೀ ರವಿ. ಡಿ. ಹೆಚ್ ಕಿರಿಯ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ, ಸೀಗೂರು.
6. ಶ್ರೀ ಗಣೇಶ್ ಎ ಸಿ ಪ್ರಭಾರ ಕಿರಿಯ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ, ಕಣಗಾಲು.
7. ಶ್ರೀ ಹರುವೇಗೌಡ ಹೆಚ್, ಕಿರಿಯ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ, ಕಿತ್ತೂರು.

ಕಾರ್ಯನಿರ್ವಾಹಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ಚಾ.ವಿ.ಸ.ನಿ.ನಿ. ಕೆ.ಆರ್.ನಗರ ರವರು ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಗೆ ಹಾಗೂ ಅಧಿಕಾರಿ/ನೌಕರರಿಗೆ ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಸಲಹೆ/ದೂರುಗಳನ್ನು ಆಲಿಸಿ ಈ ಕೆಳಕಂಡಂತೆ ಕ್ರಮವನ್ನು ಕೈಗೊಳ್ಳಲಾಯಿತು.

| ಕ್ರ.ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದಾಖಲಾದ ದೂರು/ಸಲಹೆಯ ವಿವರ | ಅನುಪಾಲನಾ ಕ್ರಮ |
|---|---|---|---|
| 1 | ಶ್ರೀ ನಾರಾಯಣ ಚಪ್ಪರದಹಳ್ಳಿ ಗ್ರಾಮ | ನಮ್ಮ ಊರಿನಿಂದ ಆಚೆ ಇರುವ ಮನೆಗಳಿಗೆ ನಿರಂತರ ವಿದ್ಯುತ್ ನೀಡುವಂತೆ ಸಭೆಯಲ್ಲಿ ಕೋರಿದರು. | ಶಾಖಾಧಿಕಾರಿ ಕಣಗಾಲು ರವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು. |
| 2 | ಶ್ರೀ ಹರೀಶ ಕೋಮಲಾಪುರ ಗ್ರಾಮ | ನಮ್ಮ ವಿದ್ಯುತ್ ಬಿಲ್ಲಿನಲ್ಲಿ ಹೆಸರು ತಪ್ಪಾಗಿದ್ದು ಅದನ್ನು ಸರಿಪಡಿಸಿಕೊಡುವಂತೆ ಸಭೆಯಲ್ಲಿ ಕೋರಿದರು | ಹಿರಿಯ ಸಹಾಯಕರಿಗೆ ಸದರಿರವರ ಹೆಸರನ್ನು ಸರಿಪಡಿಸಲು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಿದರು. |
| 3 | ಮಹದೇವ ಕೆ. ಹರಳಹಳ್ಳಿ | ಐ ಪಿ ಸೆಟ್ ಗ್ರಾಹಕರಿಗೆ ದಿನಕ್ಕೆ ಸರಿಯಾಗಿ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುತ್ತಿರುವುದಿಲ್ಲ ಎಂದು ಸಭೆಯಲ್ಲಿ ಕೋರಿದರು. | ಶಾಖಾಧಿಕಾರಿ ಸೀಗೂರು ರವರಿಗೆ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. |



Scanned with OKEN Scanner

| | | | |
|---|---|---|---|
| 4 | ಶ್ರೀ ಮಲ್ಲೇಶ ದೋರೆಕೆರೆ ಗ್ರಾಮ | ನಮ್ಮ ಮನೆ ಮೇಲೆ ವಿದ್ಯುತ್ ತಂತಿಯು ಹಾದು ಹೋಗಿದ್ದು, ಅದನ್ನು ಬದಲಾಯಿಸಿಕೊಡುವಂತೆ ಸಭೆಯಲ್ಲಿ ಕೇಳಕೊಂಡರು | ರಾವಂದೂರು ಶಾಖಾಧಿಕಾರಿ ರವರಿಗೆ ಸ್ಥಳ ಪರಿಶೀಲಿಸಿ, ಅಂದಾಜು ಪಟ್ಟಿಯನ್ನು ತಯಾರಿಸಿ, ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು. |

ಸಭೆಯ ಕೊನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕರಿಂದ ಕೇಳ ಬಂದಂತಹ ದೂರುಗಳು ಹಾಗೂ ಸಲಹೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಶಾಖಾಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಬೆಟ್ಟದಪುರ

ಪ್ರತಿಗಳು:-

1. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನ ವೃತ್ತ ಚಾ.ವಿ.ಸ.ನಿ.ನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾರ್ಯ ಮತ್ತು ಪಾಲನ ವಿಭಾಗ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನ ಶಾಖೆ ಚಾವಿಸನಿನಿ, ಬೆಟ್ಟದಪುರ/ ಕಿತ್ತೂರು/ ರಾವಂದೂರು/ ಕಣಗಾಲು/ ಸೀಗೂರು ರವರ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ದಾಖಲಾದ ದೂರುಗಳನ್ನು ತ್ವರಿತವಾಗಿ ಸರಿಪಡಿಸಿ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಕಛೇರಿ ಪ್ರತಿ.



Scanned with OKEN Scanner